ಸುದ್ದಿ ಸಿಂಚನ

ರಸ್ತೆ ದುರಸ್ತಿಗೆ ಆಗ್ರಹ

ಯಲ್ಲಾಪುರ: ಕಾಂಗ್ರೆಸ್ ಸರಕಾರ ಕಳೆದ 3 ವರ್ಷ ಗಳಿಂದ ರಸ್ತೆಗಳನ್ನು ನಿರ್ವಹಣೆ ಮಾಡದೇ ಹೊಂಡಗಳ ಭಾಗ್ಯ ಕರುಣಿಸಿದೆ. ಶೀಘ್ರ, ತಾಲೂಕಿನ ರಸ್ತೆಗಳನ್ನು ದುರಸ್ತಿ ಮಾಡುವಂತೆ ಬಿಜೆಪಿ ಮಂಡಲಾಧ್ಯಕ್ಷ ಪ್ರಸಾದ ಹೆಗಡೆ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಿಡಬ್ಲುಡಿ ರಸ್ತೆಗಳ ತುರ್ತು ನಿರ್ವಹಣೆ ಆಗದಿದ್ದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆಂದು ಎಚ್ಚರಿಸಿದರು. ಕಂಪ್ಲಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ವಿನೇಶ ಭಟ್ಟ ಮಾಳಕೊಪ್ಪ ಹಾಗೂ ಇಡಗುಂದಿ ಮಹಾಶಕ್ತಿ ಕೇಂದ್ರದ ಜಿ.ಆರ್. ಭಾಗ್ವತ್ ಮಾತನಾಡಿ, ಯಲ್ಲಾಪುರ ಶಿರಸಿ ರಸ್ತೆ, ಚಿನ್ನಾಪುರ ಬಾರೆ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಓಡಾಟ ದುಸ್ತರವಾಗಿದೆ. ಲೋಕೋಪಯೋಗಿ ಇಲಾಖೆ ನಿರ್ವಹಣೆ ನಿರ್ಲಕ್ಷ್ಯ ತಾಳಿದೆ. ವಾರದೊಳಗೆ ನಿರ್ವಹಣೆ ಆಗದೇ ಇದ್ದಲ್ಲಿ ಪ್ರತಿಭಟನೆ ನಡೆಸುತ್ತೇವೆ ಎಂದರು. ಮಂಡಲ ಉಪಾಧ್ಯಕ್ಷ ಗಣೇಶ ಹೆಗಡೆ, ಬಿಜೆಪಿ ಜಿಲ್ಲಾ ಕಾರ್ಯಕಾರಣಿ ಸದಸ್ಯ ನ್ಯಾಯವಾದಿ ಗಣೇಶ ಪಾಟಣಕರ್, ನಗರ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸೋಮೇಶ್ವರ ನಾಯ್ಕ ಮಾತನಾಡಿದರು. ನಾಗೇಂದ್ರ ಪತ್ರೇಕರ ಉಪಸ್ಥಿತರಿದ್ದರು.

ಕುಂಕುಮ ತಯಾರಿಕಾ ಕಾರ್ಯಾಗಾರ 23ರಂದು

ಯಲ್ಲಾಪುರ: ಥ್ಯಾಂಕ್ ಯು ಯುನಿವರ್ಸ್ ಅಕಾಡೆಮಿ, ಆರ್ಟ್ ಆಫ್ ಲಿವಿಂಗ್ ಯಲ್ಲಾಪುರ, ಶ್ರೀ ಮಹಾಗಣಪತಿ ಕಲಾ ಬಳಗ ಹುತ್ಕಂಡ ಕ್ಯಾಸ್ ಇವರ ಸಹಯೋಗದಲ್ಲಿ ಮನೆಯಲ್ಲೇ ಮಾಡಿರಿ ಶುದ್ಧ ಸಾಂಪ್ರದಾಯಿಕ ಕುಂಕುಮ ಎಂಬ ಕುಂಕುಮ ತಯಾರಿಕಾ ವಿಶೇಷ ಕಾರ್ಯಾಗಾರ ಆ.23ರಂದು ಬೆಳಗ್ಗೆ 10ರಿಂದ 12.30ರವರೆಗೆ ಪಟ್ಟಣದ ಅಡಕೆ ಭವನದಲ್ಲಿ ನಡೆಯಲಿದೆ. ಸಂತೋಷ ಗುಡಿಗಾರ ತರಬೇತಿ ನೀಡಲಿದ್ದು, ವಿಶೇಷ ಆಮಂತ್ರಿತರಾಗಿ ಟಿಎಂಎಸ್ ಅಧ್ಯಕ್ಷ ಎನ್.ಕೆ. ಭಟ್ಟ ಅಗ್ಗಾಶಿಕುಂಬ್ರಿ, ಪತ್ರಕರ್ತ ಶಂಕರ ಭಟ್ಟ ತಾರೀಮಕ್ಕಿ, ಅಡಕೆ ವರ್ತಕರ ಸಂಘದ ಅಧ್ಯಕ್ಷ ಆರ್.ವಿ. ಹೆಗಡೆ, ಯೋಗ ಸಾಧಕ ಸುಬ್ರಾಯ ಭಟ್ಟ ಆನೇಜಡ್ಡಿ ಆಗಮಿಸುವರು. ಹೆಸರನ್ನು ನೋಂದಾಯಿಸಲು 9945579633 ಸಂಖ್ಯೆ ಸಂಪರ್ಕಿಸ ಬಹುದು ಎಂದು ಸಂಘಟಕರು ವಿನಂತಿಸಿದ್ದಾರೆ.

ಮೊಬೈಲ್ ಟವರ್ ನಿರ್ಮಿಸಲು ಆಗ್ರಹ

ಬನವಾಸಿ: ಇಲ್ಲಿನ ನವಣಗೇರಿ, ಮುಂಡಿಗೆಹಳ್ಳಿ ಮತ್ತು ಗೋಳಿಕಟ್ಟ ಗ್ರಾಮದಲ್ಲಿ ಮೊಬೈಲ್ ಟವರ್ ನಿರ್ಮಿಸಿ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿ ಸ್ಥಳೀಯರು ಗುಡ್ನಾಪುರ ಗ್ರಾಪಂಗೆ ಮನವಿ ಸಲ್ಲಿಸಿದರು. ಒಂದು ವೇಳೆ ನೆಟ್‌ವರ್ಕ್ ಸಮಸ್ಯೆ ಬಗೆಹರಿಯದಿದ್ದಲ್ಲಿ ಗ್ರಾಮಸ್ಥರು ಸಾಮೂಹಿಕವಾಗಿ ಮತದಾನ ಬಹಿಷ್ಕಾರದ ನಿರ್ಧಾರ ಕೈಗೊಳ್ಳುತ್ತೇವೆ. ಆದ್ದರಿಂದ ನಮ್ಮ ಗ್ರಾಮದಲ್ಲಿ ಮೊಬೈಲ್ ಟವರ್ ಸ್ಥಾಪಿಸಲು ಸಂಬಂಧ ಪಟ್ಟ ಇಲಾಖೆಗೆ ಪ್ರಸ್ತಾವನೆ ಕಳಿಸಿ ಶೀಘ್ರ, ಸಮಸ್ಯೆ ಪರಿಹರಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು. ಕೃಷ್ಣಮೂರ್ತಿ ನಾಯ್ಕ, ಸುಧೀರ ಪಟಗಾರ, ಮಹೇಶ ದೇವಾಡಿಗ, ಗಣೇಶ, ಮಂಜುನಾಥ ಮಡಿವಾಳ, ವಿನಾಯಕ, ಲೋಕೇಶ್, ಗೋಪಾಲ ಸೇರಿ ಅನೇಕರಿದ್ದರು.

ಉಡುಪಿಯ ಸ್ವರ್ಗ ಆಶ್ರಮಕ್ಕೆ ಅಸಹಾಯಕ ವ್ಯಕ್ತಿ ರವಾನೆ

ಭಟ್ಕಳ: ಮುರ್ಡೇಶ್ವರದಲ್ಲಿ ಕಾಲು ಮುರಿತದಿಂದ ಅಸಹಾಯಕರಾಗಿ ತೆವಳುತ್ತಾ ಅನಾಥ ಪ್ರಜ್ಞೆಯಿಂದ ಕಾಲಕಳೆಯುತ್ತಿದ್ದ ಸುನಿಲ್ ವಿ. ಶೆಟ್ಟಿ (42) ಎಂಬವರನ್ನು ಮಾನವೀಯತೆ ದೃಷ್ಟಿಯಿಂದ ಉಡುಪಿಯ ಕೊಳಲಗಿರಿಯಲ್ಲಿರುವ ಸ್ವರ್ಗ ಆಶ್ರಮಕ್ಕೆ ಸೇರಿಸಲಾಯಿತು. ಕಳೆದ ಕೆಲವು ಸಮಯದಿಂದ ಅನಾಥರಾಗಿ ನಡೆಯಲು ಸಾಧ್ಯವಾಗದೇ ಇರುವ ಇವರ ಕುರಿತು ಶ್ರೀನಿವಾಸ ನಾಯ್ಕ ಮತ್ತು ಸುಬ್ರಹ್ಮಣ್ಯ ಗುಬ್ಬಿಮನೆ ಸ್ವರ್ಗ ಆಶ್ರಮದ ಸಂಸ್ಥಾಪಕ ಡಾ.ಶಶಿಕಿರಣ್ ಶೆಟ್ಟಿ ಮತ್ತು ಡಾ.ಸುಮಾ ಶೆಟ್ಟಿ ದಂಪತಿಗಳನ್ನು ಸಂಪರ್ಕಿಸಿದ್ದರು. ಕೂಡಲೇ ಸ್ಪಂದಿಸಿದ ಅವರು ರಾತ್ರಿಯೇ ಬಂದು ಈತನನ್ನು ರಕ್ಷಣೆ ಮಾಡಿ ತಮ್ಮ ಸ್ವರ್ಗ ಆಶ್ರಮಕ್ಕೆ ಸ್ಥಳಾಂತರಿಸಿ ಮಾನವೀಯತೆ ಮೆರೆದಿದ್ದಾರೆ. ಉಡುಪಿಯ ಕೊಳಲಗಿರಿಯಲ್ಲಿ ಮೊದಲು ಹೋಮ್ ಡಾಕ್ಟರ್‌ಫೌಂಡೇಶನ್ ಎನ್ನುವ ಸಮಾಜ ಸೇವಾ ಸಂಸ್ಥೆಯೊಂದನ್ನು ಸ್ಥಾಪಿಸಿ ಈಗ ಸ್ವರ್ಗ ಆಶ್ರಮ ಎನ್ನುವ ಅನಾಥಾಶ್ರಮವೊಂದನ್ನು ಸ್ಥಾಪಿಸಿದ ಅವರು ಈಗಾಗಲೇ ಹಲವು ಅಸಹಾಯಕರ ಪಾಲಿಗೆ ದಾರಿ ದೀಪವಾಗಿದ್ದಾರೆ. ಅಗತ್ಯವಿರುವವರು ಡಾ. ಶಶಿಕಿರಣ ಶೆಟ್ಟಿ (9945130630) ಅವರನ್ನು ಸಂಪರ್ಕಿಸಬಹುದು.

ಗ್ರಾಮ ಸಹಾಯಕರ ಧರಣಿ: ಕೇಂದ್ರ ಸ್ಥಾನ ಬಿಡಲು ಅನುಮತಿಗೆ ಮನವಿ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 24ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹೋರಾಟ

ಜಿಲ್ಲಾ ಗ್ರಾಮ ಸಹಾಯಕರ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು.

- ಆ. 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಧರಣಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಗ್ರಾಮ ಸಹಾಯಕರು ಭಾಗವಹಿಸಲಿದ್ದಾರೆ.
- ಗ್ರಾಮ ಸಹಾಯಕರ ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಸಂಘದ ಪ್ರಮುಖ ಒತ್ತಾಯವಾಗಿದೆ.

• **ಕನ್ನಡಪ್ರಭ ವಾರ್ತೆ** ಕಾರವಾರ

ಸಂವಿಧಾನಾತ್ಮಕ ಹಾಗೂ ಕಾನೂನುಬದ್ಧ ಹಕ್ಕುಗಳ ರಕ್ಷಣೆ ಸೇರಿ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದಿಂದ ಆ. 24ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಸಂಘದ ಅಧ್ಯಕ್ಷರ ಕರೆಯ ಮೇರೆಗೆ ನಡೆಯಲಿರುವ ಹೋರಾಟದಲ್ಲಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮ ಸಹಾಯಕರು ಭಾಗವಹಿಸಲು ನಿರ್ಧರಿಸಿದ್ದಾರೆ. ಈ ಹಿನ್ನೆಲೆ ಧರಣಿಯಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ಗ್ರಾಮ ಸಹಾಯಕರಿಗೆ ಕೇಂದ್ರಸ್ಥಾನದಿಂದ ಹೊರಡಲು ಅನುಮತಿ ನೀಡುವಂತೆ ಜಿಲ್ಲಾ ಗ್ರಾಮ ಸಹಾಯಕರ ಸಂಘದ ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಅನುಪಸ್ಥಿತಿಯಲ್ಲಿ ತಹಶೀಲ್ದಾರ್ ಪ್ರಮೋದ್ ನಾಯ್ಕ ಮನವಿ ಸ್ವೀಕರಿಸಿದರು.

ಕಂದಾಯ ಇಲಾಖೆಯ ಗ್ರಾಮ ಸಹಾಯಕರು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಇಲಾಖೆಯ ಕಾರ್ಯಗಳನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರೂ ತಮ್ಮ ವಿವಿಧ ಬೇಡಿಕೆಗಳು ಈಡೇರಿಲ್ಲ. ಹೀಗಾಗಿ ಸರ್ಕಾರದ ಗಮನ ಸೆಳೆಯಲು ರಾಜ್ಯ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲು ನಿರ್ಧರಿಸಲಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಆ. 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಧರಣಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಗ್ರಾಮ ಸಹಾಯಕರು ಭಾಗವಹಿಸಲಿದ್ದಾರೆ. ಗ್ರಾಮ ಸಹಾಯಕರ ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಸಂಘದ ಪ್ರಮುಖ ಒತ್ತಾಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಗ್ರಾಮ ಸಹಾಯಕರು ಧರಣಿ ಹಾಗೂ ಮುಷ್ಕರದಲ್ಲಿ ಭಾಗವಹಿಸಲು ಕೇಂದ್ರಸ್ಥಾನ ಬಿಡಲು ಅಗತ್ಯ ಅನುಮತಿ ನೀಡುವಂತೆ ಮನವಿಯಲ್ಲಿ ಕೋರಲಾಗಿದೆ. ಈ ವೇಳೆ ರಾಜ್ಯ ಸಂಘದಿಂದ ನೀಡಲಾಗಿರುವ ಕರಪತ್ರ ಹಾಗೂ ಸರ್ಕಾರಕ್ಕೆ ಸಲ್ಲಿಸಿರುವ ಬೇಡಿಕೆಗಳ ಮನವಿ ಪತ್ರದ ಪ್ರತಿಗಳನ್ನೂ ಅಧಿಕಾರಿಗಳಿಗೆ ಸಲ್ಲಿಸಲಾಯಿತು.

ಗ್ರಾಮ ಸಹಾಯಕರ ಹಕ್ಕುಗಳು ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ನಡೆಯುತ್ತಿರುವ ಹೋರಾಟಕ್ಕೆ ಜಿಲ್ಲೆಯ ಗ್ರಾಮ ಸಹಾಯಕರು ಒಗ್ಗಟ್ಟಿನಿಂದ ಬೆಂಬಲ ನೀಡಿ ಧರಣಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಸಂಘದ ಮಾಸ್ತಯ್ಯ ನಾಯ್ಕ ತಿಳಿಸಿದ್ದಾರೆ.

ಗ್ರಾಮ ಸಹಾಯಕರಾದ ದೇವೇಂದ್ರ ನಾಯ್ಕ ಶಿರಸಿ, ಸತೀಶ್ ನಾಯ್ಕ ಹೊನ್ನಾವರ, ಹರ್ಷ ನಾಯ್ಕ ಸೇರಿ ಹಲವರು ಉಪಸ್ಥಿತರಿದ್ದರು.

ಶಿಕ್ಷಕರು ಪಾಲಕರಾಗಿಯೂ ಸೇವೆ ಸಲ್ಲಿಸಲಿ: ದೇಶಪಾಂಡೆ

2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ನೀಡಿದ ಪ್ರೌಢಶಾಲೆಗಳ ಮುಖ್ಯೋಧ್ಯಾಪಕರನ್ನು ಸನ್ಮಾನಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಹಳಿಯಾಳ

ವಿದ್ಯಾರ್ಥಿಗಳು ಮನೆಯಲಿದ್ದಕ್ಕಿಂತ ಹೆಚ್ಚಿನ ಸಮಯವನ್ನು ಶಾಲೆಯಲ್ಲಿಯೇ ಕಳೆಯುತ್ತಿರುವುದರಿಂದ ವಿದ್ಯಾರ್ಥಿಗಳೊಂದಿಗೆ ನಿಮ್ಮ ಒಡನಾಟ ಜಾಸ್ತಿಯಾಗಿರುತ್ತದೆ. ಅದಕ್ಕಾಗಿ ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪಾಲಕರಾಗಿಯೂ ಸೇವೆ ಸಲ್ಲಿಸಬೇಕು, ಇದು ನಿಮ್ಮ ನೈತಿಕ ಜವಾಬ್ದಾರಿಯೂ ಹೌದು ಎಂದು ಶಾಸಕ ಆರ್.ವಿ. ದೇಶಪಾಂಡೆ ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ದಾಂಡೇಲಿಯ ಕಾಗದ ಕಾರ್ಖಾನೆಯ ಸಿಎಸ್‌ಆರ್ ನಿಧಿಯಿಂದ ನವೀಕರಣಗೊಂಡ ಬಿಇಒ ಕಾರ್ಯಾಲಯದ ಲೋಕಾರ್ಪಣೆ ಹಾಗೂ 2025-26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ನೀಡಿದ ಪ್ರೌಢಶಾಲೆಗಳ ಮುಖ್ಯೋಧ್ಯಾಪಕರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿವೃತ್ತರಾದ ನಂತರವೂ ಗೌರವ ಅಭಿಮಾನದಿಂದ ಸಮಾಜವು ಕಾಣುವ ಏಕೈಕ ಹುದ್ದೆಯು ಶಿಕ್ಷಕ ವೃತ್ತಿಯಾಗಿದೆ. ಶಿಕ್ಷಕ ವೃತ್ತಿಯು ಪವಿತ್ರವಾದ ಹುದ್ದೆಯಾಗಿದ್ದು, ನೀವೆಲ್ಲರೂ ಪುಣ್ಯವಂತರು ಎಂದರು. ಶಿಕ್ಷಕರಿಗೆ ಸರ್ಕಾರವು ಯಾವುದನ್ನೂ ಕಡಿಮೆ ಮಾಡಲಿಲ್ಲ ಎಂದ ದೇಶಪಾಂಡೆ, ಉತ್ತಮ ಶಿಕ್ಷಣವನ್ನು ನೀಡುವುದು ನಿಮ್ಮ ಕರ್ತವ್ಯವಾಗಿದೆ ಎಂದರು. ಬಿಇಒ ಪ್ರಮೋದ ಮಹಾಲೆ ಪ್ರಸ್ತಾವಿಕವಾಗಿ ಮಾತನಾಡಿ, ಕಾರ್ಯಾಲಯದ ನವೀಕರಣ ಕಾರ್ಯದ ಬಗ್ಗೆ ಮಾಹಿತಿ ನೀಡಿದರು.

ತಾಪಂ ಇಒ ವಿಲಾಸರಾಜ್ ಪ್ರಸನ್ನ, ದಾಂಡೇಲಿ ಕಾಗದ ಕಾರ್ಖಾನೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ರಾಜೇಶ್ ತಿವಾರಿ, ಸಿಎಸ್‌ಆರ್ ವಿಭಾಗದ ಹಿರಿಯ ಅಧಿಕಾರಿ ಜಿ.ಆರ್. ರಾಘವೇಂದ್ರ, ಹಳಿಯಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ದಾಂಡೇಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಶಿರಶಿ ಶೈಕ್ಷಣಿಕ ಜಿಲ್ಲಾಧ್ಯಕ್ಷ ಸತೀಶ ನಾಯ್ಕ್ ಬಾವಕೇರಿ, ತಾಲೂಕ ಅಧ್ಯಕ್ಷ ಪ್ರಶಾಂತ ನಾಯ್ಕ, ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಉದಯ ನಾಯ್ಕ, ಮಂಜು ಗುನಗಾ, ವೆಂಕಟೇಶ್ ನಾಯ್ಕ, ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಂಗೂಬಾಯಿ, ದಿನೇಶ್ ನಾಯ್ಕ ಇದ್ದರು.

ಆಶಾ ದೇಶಭಂಡಾರಿ ಹಾಗೂ ರಮೇಶ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರು.

ಸಚಿವ ನಾಗೇಂದ್ರ ವಜಾಕ್ಕೆ ಆಗ್ರಹ: 4ನೇ ದಿನಕ್ಕೆ ಕಾಲಿಟ್ಟ ಧರಣಿ

ಬಿಜೆಪಿಯ ಧರಣಿ ನಾಲ್ಕನೇ ದಿನಕ್ಕೆ ಕಾಲಿಟ್ಟಿತು.

• **ಕನ್ನಡಪ್ರಭ ವಾರ್ತೆ** ಕಾರವಾರ

ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಶಿರಸಿ-ಸಿದ್ದಾಪುರ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು, ಜಿಲ್ಲಾ ರೈತ ಮೋರ್ಚಾ ಮತ್ತು ಅಲ್ಪಸಂಖ್ಯಾತರ ಮೋರ್ಚಾ ನೇತೃತ್ವದಲ್ಲಿ ಗುರುವಾರ ಕಾರವಾರದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಇದರೊಂದಿಗೆ ಬಿಜೆಪಿಯ ಧರಣಿ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ.

ಧರಣಿ ವೇಳೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣಕಾಸು ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಚಿವ ನಾಗೇಂದ್ರ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರನ್ 2024ರ ಮೇ 26ರಂದು ಆತ್ಮಹತ್ಯೆಗೂ ಮುನ್ನ ಬರೆದಿದ್ದಾರೆ ಎನ್ನಲಾದ ಡೆತ್ ನೋಟ್‌ನಲ್ಲಿ ಸಚಿವ ನಾಗೇಂದ್ರ ಮೌಖಿಕವಾಗಿ ವಿವಿಧ ಖಾತೆಗಳಿಗೆ ಹಣ ವರ್ಗಾವಣೆ ಮಾಡುವಂತೆ ಆದೇಶಿಸಿದ್ದರು ಎಂಬ ಉಲ್ಲೇಖವಿದೆ ಎಂದು ಆರೋಪಿಸಿದರು. ಯಾವ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂಬ ಮಾಹಿತಿಯನ್ನೂ ಅದರಲ್ಲಿ ದಾಖಲಿಸಲಾಗಿದೆ. ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಸಚಿವ ನಾಗೇಂದ್ರ ಅವರನ್ನು ಕೂಡಲೇ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೆ.ಜಿ. ನಾಯ್ಕ ಮಾತನಾಡಿದರು. ಧರಣಿಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಚಂದ್ರು ಎಸಳೆ, ಶಿರಸಿ ನಗರ ಮಂಡಲ ಅಧ್ಯಕ್ಷ ಆನಂದ ಸಾಲೇರ, ಶಿರಸಿ ಬಿಜೆಪಿ ಗ್ರಾಮೀಣ ಅಧ್ಯಕ್ಷೆ ಉಷಾ ಹೆಗಡೆ, ಸಿದ್ದಾಪುರ ಮಂಡಲ ಅಧ್ಯಕ್ಷ ತಿಮ್ಮಪ್ಪ ಎಂ.ಕೆ., ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಜಾಯ್ಸನ್ ಡಿಸೋಜಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ ನಾಯಕ, ಬಿಜೆಪಿ ಪ್ರಮುಖರಾದ ರಾಜು ಭಂಡಾರಿ, ಮಾಧ್ಯಮ ಸಹ ಸಂಚಾಲಕ ಕಿಶನ್ ಕಾಂಬಳೆ, ಕಾರವಾರ ನಗರ ಮಂಡಲ ಅಧ್ಯಕ್ಷ ನಾಗೇಶ ಕುರ್ಡೇಕರ, ರೈತ ಮೋರ್ಚಾ ಉಪಾಧ್ಯಕ್ಷರಾದ ಸುರೇಶ ನಾಯ್ಕ ಹಾಗೂ ಬಸಣ್ಣ ಕುರುಬಕಟ್ಟಿ, ಯಲ್ಲಾಪುರ ರೈತ ಮೋರ್ಚಾ ಅಧ್ಯಕ್ಷ ರಾಮಣ್ಣ ಚಿಕ್ಯಾನಮನೆ ಸೇರಿ ಶಿರಸಿ-ಸಿದ್ದಾಪುರ ಕ್ಷೇತ್ರದ ಹಾಗೂ ರೈತ ಮೋರ್ಚಾದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ದಾನದಂತಹ ಶ್ರೇಷ್ಠ ಕಾರ್ಯದಲ್ಲಿ ತೊಡಗಿಕೊಳ್ಳಿ: ಕೋಣೆಮನೆ

ವಿಶ್ವದರ್ಶನ ಪ್ರೌಢಶಾಲೆಗೆ ಕ್ರೀಡಾಸಾಮಗ್ರಿ ವಿತರಣೆ

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ಯುವಕರಿರುವಾಗಲೇ ದಾನದಂತಹ ಶ್ರೇಷ್ಠ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ನಮ್ಮ ಆದಾಯದ ಕೆಲವು ಭಾಗವನ್ನು ದಾನಕ್ಕಾಗಿ ಮೀಸಲಿಡಬೇಕು. ಇಂದಿನ ವಿದ್ಯಾರ್ಥಿ ಮುಂದೆ ವೃತ್ತಿಜೀವನದಲ್ಲಿ ಸಾಧನೆ ಮಾಡಿದಾಗ ಸಮಾಜದ ಋಣ ತೀರಿಸುವ ಕುರಿತು ಚಿಂತನೆ ನಡೆಸಬೇಕು ಎಂದು ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಹೇಳಿದರು.

ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ದಾನವೇ ಭೂಮಿಯಲ್ಲಿ ಶ್ರೇಷ್ಠ ಸಂಸ್ಥೆಯವರು ಉಚಿತವಾಗಿ ನೀಡಿದ ಕ್ರೀಡಾಸಾಮಗ್ರಿ ವಿತರಿಸಿ ಮಾತನಾಡಿದರು.

ದಾನವೇ ಭೂಮಿಯಲ್ಲಿ ಶ್ರೇಷ್ಠ ಸಂಸ್ಥೆಯ ಮುಖ್ಯಸ್ಥ ದಯಾನಂದ ಹೆಗಡೆ ಸಂಸ್ಥೆ ನಡೆದು ಬಂದ ದಾರಿಯ ಕುರಿತು ವಿವರಿಸಿದರು. ಎಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕ ಜಯನಾರಾಯಣ ಭಟ್ಟ ಸಾಂದರ್ಭಿಕವಾಗಿ ಮಾತನಾಡಿದರು. ಸಂಸ್ಥೆಯ ಸದಸ್ಯ ಮಂಜುನಾಥ ಹೆಗಡೆ, ಯೋಗಪಟು ನಾಗೇಶ ರಾಯ್ಕರ್, ತರಕಾರಿ ವ್ಯಾಪಾರಿ ಮಂಜುನಾಥ ಕಡ್ಲಿಮನಿ, ವಿಶ್ವದರ್ಶನ ಶೈಕ್ಷಣಿಕ ಸಂಯೋಜಕ ಡಾ. ಡಿ.ಕೆ. ಗಾಂವ್ಕರ ಉಪಸ್ಥಿತರಿದ್ದರು. ಪ್ರೌಢಶಾಲಾ ಮುಖ್ಯಾಧ್ಯಾಪಕಿ ಮುಕ್ತಾ ಶಂಕರ ಸ್ವಾಗತಿಸಿದರು. ಶಿಕ್ಷಕಿ ಪ್ರೇಮಾ ಗಾಂವ್ಕರ ವಂದಿಸಿದರು.

ಸಿದ್ದರ ಅಕ್ಕಿ ಗೋದಾಮಿನಲ್ಲಿ ಅವ್ಯವಸ್ಥೆ: ಸ್ವಚ್ಛತಾ ವ್ಯವಸ್ಥೆ ಕಲ್ಪಿಸುವಂತೆ ಗ್ರಾಮಸ್ಥರ ಆಗ್ರಹ

• **ಕನ್ನಡಪ್ರಭ ವಾರ್ತೆ** ಕಾರವಾರ

ಸಿದ್ದರ ಗ್ರಾಮದ ಅಕ್ಕಿ ಗೋದಾಮಿನ ಸುತ್ತಮುತ್ತ ಸ್ವಚ್ಛತೆಕಾಯ್ದುಕೊಳ್ಳುವಿಕೆ, ಕಾರ್ಮಿಕರಿಗೆ ಸೂಕ್ತ ಶೌಚಾಲಯ ವ್ಯವಸ್ಥೆ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ತುರ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಗ್ರಾಮಸ್ಥರು ಹಾಗೂ ರೈತರ ಪರವಾಗಿ ಸ್ವಚ್ಛತಾ ಸೇವಕ ಜಗದೀಶ ಗಾಂವ್ಕರ್‌ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರಿಗೆ ಮನವಿ ಮಾಡಿದ್ದಾರೆ.

ಸಿದ್ದರ ಗ್ರಾಮದ ಅಕ್ಕಿ ಗೋದಾಮಿಗೆ ಪ್ರತಿದಿನ ಅಕ್ಕಿ ಇಳಿಸಲು ಹಲವು ಟ್ರಕ್ ಆಗಮಿಸುತ್ತಿದ್ದು, ಅಲ್ಲಿನ ಕಾರ್ಮಿಕರಿಗೆ ಸೂಕ್ತ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ ರೈತರ ಜಮೀನುಗಳ ಸಮೀಪ ಹಾಗೂ ರಸ್ತೆ ಬದಿಯಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತಿರುವ ಆರೋಪ ಕೇಳಿಬಂದಿದೆ.

ಇದರಿಂದ ಗ್ರಾಮಸ್ಥರು, ರೈತರಿಗೆ ತೀವ್ರ ತೊಂದರೆಯಾಗಿದ್ದು, ಗೋದಾಮಿನ ಸುತ್ತಮುತ್ತ ವಾತಾವರಣ ಮಲಿನಗೊಳ್ಳುವಂತಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸ್ವಚ್ಛತಾ ಸೇವಕ ಜಗದೀಶ ಗಾಂವ್ಕರ್‌ಕಾರವಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ರೇವಣಕರ್‌ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಸಮಸ್ಯೆಯನ್ನು ವಿವರಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದಾಗಿ ಉಪ ನಿರ್ದೇಶಕರು ಭರವಸೆ ನೀಡಿದ್ದಾರೆ. ಗೋದಾಮಿನಲ್ಲಿ ಈಗಾಗಲೇ ಯಾವುದೇ ಶೌಚಾಲಯ, ಸ್ನಾನಗೃಹ ಅಥವಾ ಕೊಠಡಿ ಇದ್ದಲ್ಲಿ ಅದರ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎನ್ನಲಾಗಿದೆ.

ಅಲ್ಲದೆ, ಗೋದಾಮುಗಳ ನಿರ್ವಹಣೆ ಹಾಗೂ ಸ್ವಚ್ಛತೆ ಕುರಿತು ಬೆಂಗಳೂರಿನ ಪ್ರದೀಪ್ ಬಿ.ಎಂ. ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿ, ಅವರ ಅಧೀನದಲ್ಲಿರುವ ಎಲ್ಲ ಗೋದಾಮುಗಳ ಸ್ವಚ್ಛತೆ ಹಾಗೂ ನಿರ್ವಹಣೆಗೆ ಹೆಚ್ಚಿನ ಗಮನ ನೀಡುವಂತೆ ಸೂಚಿಸಲಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಗೋದಾಮಿನ ಸುತ್ತಮುತ್ತ ನೊಣಗಳು, ಕೀಟಗಳು ಹಾಗೂ ತ್ಯಾಜ್ಯದಿಂದ ಅಸ್ವಚ್ಛತೆ ಹೆಚ್ಚಾಗಿದ್ದು, ಇದರಿಂದ ಗ್ರಾಮಸ್ಥರು, ವಿಶೇಷವಾಗಿ ಮಕ್ಕಳು, ಅನಾರೋಗ್ಯಕ್ಕೆ ಒಳಗಾಗುವ ಆತಂಕವಿದೆ.

ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಸಮಸ್ಯೆಯನ್ನು ನಿರ್ಲಕ್ಷಿಸದೆ ತಕ್ಷಣ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಸಾರ್ವಜನಿಕರು ಪ್ರತಿಭಟನೆಗೆ ಮುಂದಾಗುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಶೀಲಿಸಬೇಕು.

ಕಾರ್ಮಿಕರಿಗೆ ಸೂಕ್ತ ಶೌಚಾಲಯ ಹಾಗೂ ಸ್ವಚ್ಛತಾ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಗೋದಾಮಿನ ಸುತ್ತಮುತ್ತ ನಿಯಮಿತವಾಗಿ ಸ್ವಚ್ಛತೆ ಕಾಪಾಡುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಿದ್ದರ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಇಡಗುಂಜಿ ದೇವಾಲಯಕ್ಕೆ ಉಪಸಭಾಧ್ಯಕ್ಷ ವೈದ್ಯ ಭೇಟಿ

• **ಕನ್ನಡಪ್ರಭ ವಾರ್ತೆ** ಹೊನ್ನಾವರ

ವಿಧಾನಸಭೆಗೆ ನೂತನ ಉಪಸಭಾಧ್ಯಕ್ಷರಾಗಿ ಆಯ್ಕೆಯಾದ ಮಂಕಾಳ ವೈದ್ಯ ಇಡಗುಂಜಿ ಮಹಾಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಬುಧವಾರ ಬೆಳಗ್ಗೆ ಕುಟುಂಬ ಸಮೇತರಾಗಿ ಮುಖಂಡರು, ಕಾರ್ಯಕರ್ತರೊಂದಿಗೆ ಇಡಗುಂಜಿ ಆಗಮಿಸಿದ ವೈದ್ಯರು ಮಹಾಗಣಪತಿಗೆ ಪೂಜೆ ಸಲ್ಲಿಸಿದರು. ಅದರ ನಂತರ ನೂತನ ಉಪಸಭಾಧ್ಯಕ್ಷರಿಗೆ ನೀಡಲಾದ ವಾಹನಕ್ಕೂ ಪೂಜೆ ನಡೆಸಿದರು.

ಮಂಕಾಳ ವೈದ್ಯರು ಯಾವುದೇ ಕೆಲಸಕಾರ್ಯ ಮಾಡುವಾಗಲು ಇಡಗುಂಜಿ ಮಹಾಗಣಪತಿಗೆ ಮೊದಲು ಪೂಜೆ ಸಲ್ಲಿಸುತ್ತಾರೆ. ಚುನಾವಣೆಯಲ್ಲಿ ಆಯ್ಕೆಯಾದ ತಕ್ಷಣ ಇಡಗುಂಜಿಗೆ ಬಂದು ಪೂಜೆ ಸಲ್ಲಿಸಿದ್ದರು. ಈಗ ನೂತನ ಉಪಸಭಾಧ್ಯಕ್ಷರಾಗಿ ಆಯ್ಕೆಯಾದ ಮರುದಿನವೆ ತನ್ನ ಆರಾಧ್ಯ ದೈವ ಇಡಗುಂಜಿಗೆ ಬಂದು ಪೂಜೆ ಸಲ್ಲಿಸಿದ್ದಾರೆ.

ಅದಕ್ಕೂ ಮೊದಲು ರಾಷ್ಟ್ರೀಯ ಹೆದ್ದಾರಿಯ ಇಡಗುಂಜಿ ಕ್ರಾಸ್‌ನಲ್ಲಿ ಮುಖಂಡರು, ಅಭಿಮಾನಿಗಳು, ಕಾರ್ಯಕರ್ತರು ವೈದ್ಯರನ್ನು ಅದ್ದೂರಿಯಾಗಿ ಸ್ವಾಗತಿಸಿದರು. ಅಲ್ಲಿಂದ ಇಡಗುಂಜಿಗೆ ತೆರಳಿ ಪೂಜೆ ಸಲ್ಲಿಸಿದರು.

ಇಡಗುಂಜಿಗೆ ತೆರಳಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ವೈದ್ಯರ ಪತ್ನಿ ಪುಷ್ಪಲತಾ ಎಂ.ಎಸ್., ಮಗಳು ಬೀನಾ ವೈದ್ಯ, ಮಂಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯ್ಕ, ಭಟ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ್ ನಾಯ್ಕ, ಮಹಿಳಾ ಘಟಕದ ಅಧ್ಯಕ್ಷೆ ಉಷಾ ನಾಯ್ಕ ಸೇರಿ ಮಂಕಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಯ ಅನೇಕ ಪ್ರಮುಖ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ) ಶಿವಮೊಗ್ಗ 577 222.

ಐ.ಎಫ್.ಬಿ. ಸಂಖ್ಯೆ/ಶಿದಾಚಿಸಹಾ./ಖರೀದಿ/ಇ-ಪ್ರೊ/ಟೆಂಡರ್-281ಇ/3394/2026-27 ದಿನಾಂಕ: 19-08-2026

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in)** ನ ಮೂಲಕ ಮಾತ್ರ ಟೆಂಡರ್ ಸಲ್ಲಿಸುವುದು)

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ ಅಗತ್ಯವಿರುವ ಈ ಕೆಳಕಂಡ ಸಾಮಗ್ರಿ/ಯಂತ್ರೋಪಕರಣಗಳ ಖರೀದಿಗೆ ಅರ್ಹ ಆಸಕ್ತ ಸಂಸ್ಥೆಯವರಿಂದ ಜಿ.ಒ.ಕೆಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯುಮೆಂಟ್ ಸಿಸ್ಟಮ್‌ನಲ್ಲಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು ವಿವರ ಕೆಳಕಂಡಂತಿದೆ.

ಕ್ರ.ಸಂ.	ವಿವರ	ಪ್ರಮಾಣ	ಪಾವತಿಸಬೇಕಾದ ಇ.ಎಂ.ಡಿ ರೂಗಳಲ್ಲಿ
1	ದಾವಣಗೆರೆ ಡೇರಿಗೆ 750 ಕೆವಿಎ /800 ಕೆವಿಎ ಸಾಮರ್ಥ್ಯದ ಟ್ರಾನ್ಸ್ ಫಾರ್ಮರ್ ಸರಬರಾಜು ಮಾಡಿ ಅಳವಡಿಸುವುದು.	01 ಸಂಖ್ಯೆ	60,000/-
2	ಶಿವಮೊಗ್ಗ ಡೈರಿಗೆ ವಾರ್ಷಿಕ ದರ ಒಪ್ಪಂದದ ಮೇರೆಗೆ ಕೊಲ್ಹಾಪುರ ಬೆಲ್ಲ ಸರಬರಾಜು ಮಾಡುವುದು.	8,000 ಕೆ.ಜಿ	13,600/-
3	ಶಿವಮೊಗ್ಗ ಡೈರಿಗೆ ವಾರ್ಷಿಕ ದರ ಒಪ್ಪಂದದ ಮೇರೆಗೆ ಶೇಂಗಾ ಬೀಜ (Pea Nuts) ಸರಬರಾಜು ಮಾಡುವುದು.	15,000 ಕೆ.ಜಿ	51,975/-

1. ಟೆಂಡರ್ ದಾಸ್ತವೇಜುಗಳನ್ನು ಜಿ.ಒ.ಕೆ ಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ದಿನಾಂಕ:21-08-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.**
2. ಭರ್ತಿ ಮಾಡಿದ ಟೆಂಡರು ದಾಖಲಾತಿಗಳನ್ನು ಅಪಲೋಡ್ ಮಾಡಲು **ದಿನಾಂಕ: 07.09.2026 ರಂದು** ಸಮಯ: ಸಂಜೆ 4.00 ಗಂಟೆ ಒಳಗೆ .
3. ತಾಂತ್ರಿಕ ಟೆಂಡರ್ ತೆರೆಯುವ **ದಿನಾಂಕ:08.09.2026 ರಂದು ಸಮಯ: ಸಂಜೆ 4.30 ಗಂಟೆಗೆ.**
4. ವಾಣಿಜ್ಯ ಟೆಂಡರ್ ತೆರೆಯುವ **ದಿನಾಂಕ:09.09.2026 ರಂದು ಸಮಯ: ಸಂಜೆ 4.30 ಗಂಟೆಗೆ.**
5. ಟೆಂಡರ್‌ದಾರರು ವಿವರವಾದ ಟೆಂಡರ್ ದಾಸ್ತವೇಜುಗಳನ್ನು ಜಿ.ಒ.ಕೆ ಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ಇ-ಪೋರ್ಟಲ್ ಶುಲ್ಕ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳುವುದು.

ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸಲು ಸಂಬಂಧಿಸಿದ ವಿವರಗಳನ್ನು ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಗೆ ಲಾಗ್ ಇನ್ ಆಗುವ ಮೂಲಕ ಪಡೆಯಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ಮುಖ್ಯಸ್ಥರನ್ನು ದೂರವಾಣಿ ಸಂಖ್ಯೆ: 08182-246161/246163 ಮೊಬೈಲ್ ಸಂಖ್ಯೆ: 7760971951 ರ ಮೂಲಕ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

बैंक ऑफ़ बड़ौदा Bank of Baroda | ಬ್ಯಾಂಕ್ ಆಫ್ ಬರೋಡಾ, ಪ್ರಾದೇಶಿಕ ಕಚೇರಿ, ಶಿವಮೊಗ್ಗ | ಶಿರಸಿ ಎಪಿಎಂಸಿ ಯಾರ್ಡ್ ಶಾಖೆ, ಟಿ.ಎಸ್.ಎಸ್. ಕಟ್ಟಡ ಎಪಿಎಂಸಿ ಯಾರ್ಡ್, ಶಿರಸಿ, ಉತ್ತರ ಕನ್ನಡ, ಕರ್ನಾಟಕ-581402. Email: vjapmc@bankofbaroda.co.in Web: www.Bankofbaroda.bank.in | ಇ-ಹರಾಜು

ಚರ ಆಸ್ತಿಗಳ ಮಾರಾಟದ ಸೂಚನೆ ಅನುಬಂಧ- IV-A [ನಿಯಮ 6 (2) ಮತ್ತು 8 (6) ರ ನಿಬಂಧನೆಯನ್ನು ನೋಡಿ]

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6 (2) ಮತ್ತು 8 (6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಚಲಿಸಬಲ್ಲ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ. ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಜಾಮೀನುದಾರರುಗಳಿಗೆ ಸೂಚನೆ ನೀಡುತ್ತಾ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ಅವರು ಸ್ವಾಧೀನಪಡಿಸಿಕೊಂಡಿರುವ, ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ ಇಡಲಾದ/ವಿಧಿಸಲಾದ ಕೆಳಗೆ ವಿವರಿಸಲಾದ ಚರ ಆಸ್ತಿಯನ್ನು ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಎಲ್ಲಿ ಇರುವುದೋ ಹಾಗೆಯೇ" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರು/ರು/ಅಡಮಾನದಾರರು/ಗ್ಯಾರಂಟರ್‌ಗಳು/ಸೆಕ್ಯೂರ್ಡ್ ಆಸ್ತಿಗಳು/ಬ್ಯಾಗುಗಳು/ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ

ಕ್ರಮ ಸಂಖ್ಯೆ	ಸಾಲಗಾರರ/ ಜಾಮೀನುದಾರರ ಅಡಮಾನದಾರರ/ರ/ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಚರ ಆಸ್ತಿಯ ವಿವರವಾದ ವಿವರಣೆ, ಯಾವುದಾದರೂ ಇದ್ದರೆ	ಒಟ್ಟು ಬಾಕಿ 15-08-2026ರಂದ	ಇ-ಹರಾಜಿನ ದಿನಾಂಕ ಇ-ಹರಾಜಿನ ಸಮಯ - ಪ್ರಾರಂಭದಿಂದ ಅಂತ್ಯದ ಸಮಯ	1. ಮೀಸಲು ಬೆಲೆ ರೂ. 2. (ಇಎಂಡಿ) ಮೊತ್ತ 3. ಬಿಡ್ ಹೆಚ್ಚಳದ ಮೊತ್ತ	ಸ್ವಾಧೀನದ ಸ್ಥಿತಿ (ರಚನಾತ್ಮಕ/ ಭೌತಿಕ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	ಸಾಲಗಾರರು: ಮಾಧವ್ ಶಂಕರ್ ರೇವಣಕರ್, ಹೆಚ್.ನಂ.11, ಸೂರುಲಕೊಪ್ಪ, ಹುಸಾರಿ ಪೋಸ್ಟ್, ಶಿರಸಿ ಜಾಮೀನುದಾರರು: ಸಂಧ್ಯಾ ಮಾಧವ್ ರೇವಣಕರ್, ಹೆಚ್.ನಂ.11, ಸೂರುಲಕೊಪ್ಪ, ಹುಸಾರಿ ಪೋಸ್ಟ್, ಶಿರಸಿ	STIHL Tirol GmBH, Motocard - 350 3.9 HP 4 Stroke (Petrol), Power Triler	ರೂ. 1,15,406.59/-(ಒಂದು ಲಕ್ಷದ ಹದಿನೈದು ಸಾವಿರದ ನಾಲ್ಕುನೂರ ಆರು ಮತ್ತು ಐವತ್ತೊಂಭತ್ತು ಪೈಸೆ) ಜೊತೆಗೆ ಅನ್ವಯಿಸಿದ ಬಡ್ಡಿ 16-08-2026 ರಿಂದ + ವಸೂಲಾತಿ ಶುಲ್ಕಗಳು ಮತ್ತು + ಸೂಟ್ ಶುಲ್ಕಗಳು	ಇ-ಹರಾಜಿನ ದಿನಾಂಕ 25-09-2026 ಇ-ಹರಾಜಿನ ಸಮಯ ಪ್ರಾರಂಭ ಸಮಯ ಮಧ್ಯಾಹ್ನ 2.00ರಿಂದ 6.00ರವರೆಗೆ (ಸ್ವಯಂಚಾಲಿತ ಸಮಯದೊಂದಿಗೆ ಮಾರಾಟ ಪೂರ್ಣಗೊಳ್ಳುವವರೆಗೆ ತಲಾ 10 ನಿಮಿಷಗಳ ವಿಸ್ತರಣೆ)	1. ಮೀಸಲು ಬೆಲೆ ರೂ. 30,000/- 2. ಇಎಂಡಿ ಮೊತ್ತ ರೂ. 3,000/- 3. ಬಿಡ್ ಹೆಚ್ಚಳದ ಮೊತ್ತ ರೂ. 2,000	ಭೌತಿಕ ಸ್ವಾಧೀನ	17-09-2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 2.00 ರವರೆಗೆ

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ ಲಿಂಕ್ https://www.bankofbaroda.in/e-auction.htm ಮತ್ತು ಆನ್‌ಲೈನ್ ಹರಾಜು ಪೋರ್ಟಲ್ https://baanknet.in ಅಥವಾ https://baanknet.in ಅನ್ನು ನೋಡಿ/ಭೇಟಿ ನೀಡಿ. ಅಲ್ಲದೆ, ಸಂಭಾವ್ಯ ಬಿಡ್ಡುದಾರರು ಅಧಿಕೃತ ಅಧಿಕಾರಿಯನ್ನು Mobile: 8451015253.ಗೆಸಂಪರ್ಕಿಸಬಹುದು.

ಸ್ಥಳ: ಶಿರಸಿ ದಿನಾಂಕ: 19-08-2026 ಸಹಿ/- ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

Scanned with OKEN Scanner